ಪರಾತ್ಪರ ಗುರು ಡಾ. ಆಠವಲೆಯವರು
ತೆಗೆದುಕೊಂಡ ಅಧ್ಯಯನವರ್ಗಗಳು : ಖಂಡ ೧

# ಪರಾತ್ಪರ ಗುರು ಡಾ. ಆಠವಲೆಯವರ ೧೯೯೨ ರಲ್ಲಿನ ಅಧ್ಯಯನವರ್ಗಗಳು

## (ಸಾಧನೆಯ ಬಗ್ಗೆ ವಿವೇಚನೆ, ಸಂದೇಹ ನಿವಾರಣೆ ಇತ್ಯಾದಿಗಳ ಸಹಿತ)

(Paratpar Guru (Dr.) Athavale’s Spiritual Workshops in 1992)
ಕನ್ನಡ (Kannada)


**ಸಂಕಲನಕಾರರು**

卐 **ಪರಾತ್ಪರ ಗುರು ಡಾ. ಜಯಂತ ಬಾಳಾಜಿ ಆಠವಲೆ**

(‘ಸಂತಪದವಿ’ ಅಥವಾ ‘ಗುರುಪದವಿ’ ಎಂದರೆ ಶೇ. ೭೦,
‘ಸದ್ಗುರುಪದವಿ’ ಎಂದರೆ ಶೇ. ೮೦ ಹಾಗೂ ‘ಪರಾತ್ಪರ ಗುರುಪದವಿ’
ಎಂದರೆ ಶೇ. ೯೦ ಮತ್ತು ‘ಈಶ್ವರ’ನೆಂದರೆ ಶೇ. ೧೦೦ ರಷ್ಟು ಆಧ್ಯಾತ್ಮಿಕ ಮಟ್ಟ !)

卐 **ಶ್ರೀ. ವಿವೇಕ ಬಾಳಕೃಷ್ಣ ಪೆಂಡ್ಸೆ**



**ಸನಾತನ ಸಂಸ್ಥೆ**


**ಸೆಪ್ಟೆಂಬರ್ ೨೦೨೧ ರ ವರೆಗೆ ಸನಾತನದ ೩೪೮ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೨,೪೮,೦೦೦ ಪ್ರತಿಗಳು !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು ಕು. ಭಾವಿನಿ ಕಪಾಡಿಯಾ

**First Edition** : Deepavali, Kaliyug Varsh 5123
(5th November 2021)

Translated from the original Marathi text 'Paratpar Guru Dr. Athavale Yanche Varsh 1992 Madhil Abhyasvarg'

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 75/–

**ISBN :** 978-81-953183-7-7

ॐ ಗ್ರಂಥ ಕ್ರ. : 330

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಪರಾತ್ಪರ ಗುರು ಡಾ. ಆಠವಲೆಯವರು ವ್ಯಕ್ತಪಡಿಸಿದ ಕೃತಜ್ಞತೆ ! ೧೩

೩. ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ತೆಗೆದುಕೊಂಡ ಅಧ್ಯಾತ್ಮದ ಅಧ್ಯಯನವರ್ಗಗಳು : ಸಾಧನೆಯ ಬಗ್ಗೆ ಚೈತನ್ಯಮಯ ಮಾರ್ಗದರ್ಶನ ಮಾಡುವ ದೀಪಸ್ತಂಭ ! ೧೪

---

## ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)

**ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ೧೯೯೨ ರಲ್ಲಿ ತೆಗೆದುಕೊಂಡ ಅಧ್ಯಾತ್ಮದ ಅಧ್ಯಯನವರ್ಗಗಳು** ೧೯

**ಅಧ್ಯಾಯ ೧ : ಪ.ಪೂ. ಡಾ. ಆಠವಲೆಯವರು ತೆಗೆದುಕೊಳ್ಳುತ್ತಿದ್ದ ಅಧ್ಯಯನವರ್ಗಗಳ ಆರಂಭ, ಸ್ವರೂಪ ಮತ್ತು ಸಾಧಕರಿಗೆ ಕಲಿಯಲು ಸಿಕ್ಕಿದ ಅಂಶಗಳು** ೨೧

೧. ೧೯೯೧ ರಿಂದ ೧೯೯೪ ರ ವರೆಗೆ ಒಂದರಿಂದ ಒಂದೂವರೆ ತಿಂಗಳುಗಳ ಅಂತರದಲ್ಲಿ ಪ.ಪೂ. ಡಾಕ್ಟರರು ಅಧ್ಯಯನವರ್ಗಗಳನ್ನು ತೆಗೆದುಕೊಳ್ಳಲು ಮುಂಬೈಯಿಂದ ಗೋವಾಕ್ಕೆ ಬರುವುದು ೨೧

೨. ಅಧ್ಯಾತ್ಮಪ್ರಸಾರದ ಕಾರ್ಯವನ್ನು ಹೆಚ್ಚಿಸಲು ಆರಂಭದಲ್ಲಿ ಪ.ಪೂ. ಡಾಕ್ಟರರು ಅಧ್ಯಾತ್ಮದ ಬಗ್ಗೆ ಅಧ್ಯಯನವರ್ಗಗಳನ್ನು ತೆಗೆದುಕೊಳ್ಳುವುದು ಮತ್ತು ಅವುಗಳಲ್ಲಿ ವಿವಿಧ ವಿಷಯಗಳನ್ನು ಕಲಿಸುವುದು ೨೨

೧೧. ಸಂತರನ್ನು ಭೇಟಿಯಾಗಲು ಸಾಧಕರನ್ನು ಜೊತೆಗೆ ಕರೆದೊಯ್ಯುವುದು ಮತ್ತು 'ಸಂತರೊಂದಿಗೆ ಹೇಗೆ ವರ್ತಿಸಬೇಕು ?' ಎಂಬುದನ್ನು ಕಲಿಸುವುದು ೨೯

೧೨. ಅಧ್ಯಯನವರ್ಗಗಳ ಮಾಧ್ಯಮದಿಂದ ಎಲ್ಲ ಸಾಧಕರಲ್ಲಿ ಕೌಟುಂಬಿಕ ಭಾವನೆಯನ್ನು ನಿರ್ಮಿಸುವುದು ೩೧

**ಅಧ್ಯಾಯ ೨ : ಮಹಾರಾಷ್ಟ್ರದ ಸಾವಂತವಾಡಿಯಲ್ಲಾದ ಅಧ್ಯಯನವರ್ಗ (೮.೫.೧೯೯೨)** ೩೭

೨. ನಾಮಜಪ ಮಾಡುವಾಗ ಮನಃಶಾಂತಿ ಕದಡುವ ಕಾರಣ ೩೭

೭. ಮೂರು ಸಲ ಸ್ವಪ್ನದೃಷ್ಟಾಂತವಾದರೆ ಅದನ್ನು ನಿಜವೆಂದು ತಿಳಿಯಬೇಕು ! ೩೯

೧೧. ಸಂತರ ದರ್ಶನಕ್ಕೆ ಹೋಗುವುದರ ಮಹತ್ವ ! ೪೦

**ಅಧ್ಯಾಯ ३ : ಪಣಜಿಯ ಮಿನೇಝಸ್ ಬ್ರಾಗಾಂಝಾ ಹಾಲ್‌ನಲ್ಲಿ ನಡೆದ ಅಧ್ಯಯನವರ್ಗ (೧೦.೫.೧೯೯೨)** **೪३**

೪. ಸಂತರು ಮತ್ತು ಜ್ಯೋತಿಷಿಗಳು ೪೪

೧೧. ಪ.ಪೂ. ಭಕ್ತರಾಜ ಮಹಾರಾಜರು ಬೈಯ್ಯುವುದರ ಕಾರಣ ೪೬

೧೫. ಗುರುಸೇವೆಯಿಂದ 'ಅಹಂ' ಕಡಿಮೆಯಾಗುವುದು ೪೭

೨३. ಶ್ರೀ ಸಾಯಿಬಾಬಾರವರು ಮಾತನಾಡುವಾಗ ಒಮ್ಮೆಲೇ ಬೆಂಕಿಯಲ್ಲಿ ಕೈ ಹಾಕುವುದರ ಕಾರಣ ೪೯

**ಅಧ್ಯಾಯ ೪ : ಪಣಜಿಯ ಮಿನೇಝಸ್ ಬ್ರಾಗಾಂಝಾ ಹಾಲ್‌ನಲ್ಲಿ ನಡೆದ ಅಧ್ಯಯನವರ್ಗ (೭.೬.೧೯೯೨)** **೫೦**

३. ಆಧ್ಯಾತ್ಮಿಕ ಮಟ್ಟಕ್ಕನುಸಾರ ಸಾಧನೆಯಲ್ಲಿನ ಕೃತಿ ಮತ್ತು ಆಗುವ ತ್ಯಾಗ ೫೦

೪. ಅನುಭೂತಿಗಳಲ್ಲಿ ಸಿಲುಕದೇ ಮುಂದಿನ ಹಂತಕ್ಕೆ ಹೋಗುವುದು ಆವಶ್ಯಕವಾಗಿದೆ. ೫೦

೧೪. ತನು, ಮನ ಮತ್ತು ಧನದ ತ್ಯಾಗ ೫೪

೧೭. ಮನುಷ್ಯಜನ್ಮದ ಕಾರಣಗಳು ಮತ್ತು ಅವುಗಳ ಪ್ರಮಾಣ ೫೫

೨೦. ಸಂತರ ಹೆಸರಿನ ಜಪ ಮತ್ತು ದೇವತೆಗಳ ನಾಮಜಪ ೫೫

೨३. ಸ್ವೇಚ್ಛೆ, ಪರೇಚ್ಛೆ ಮತ್ತು ಈಶ್ವರೇಚ್ಛೆ ಇವುಗಳಿಗನುಸಾರ ವ್ಯಕ್ತಿಯಲ್ಲಿನ ತ್ರಿಗುಣಗಳ ಪೈಕಿ ಪ್ರಧಾನ ಗುಣ ಮತ್ತು ಅಹಂಭಾವದ ಪ್ರಮಾಣ ೫೭

**ಅಧ್ಯಾಯ ೫ : ಸಾವಂತವಾಡಿ (ಸಿಂಧುದುರ್ಗ ಜಿಲ್ಲೆ, ಮಹಾರಾಷ್ಟ್ರ) ಯಲ್ಲಿ ನಡೆದ ಅಧ್ಯಯನವರ್ಗ (೨೭.೯.೧೯೯೨)** **೬೨**

೬. ಸುಖ ಮತ್ತು ಶಾಂತಿ ಇವುಗಳಲ್ಲಿನ 'ನಾನು' (ಅಹಂ) ೬೪

೯. ಭೂಲೋಕ ಅಂದರೆ ಕರ್ಮಭೂಮಿ ಮತ್ತು ಭೋಗಭೂಮಿ. ಭುವರ್ಲೋಕವೆಂದರೆ ಭೋಗಭೂಮಿ. ೬೫

೨೭. ಉಚ್ಚ ದೇವತೆಗಳು ಮತ್ತು ಕ್ಷುದ್ರದೇವತೆಗಳು ೭೦

೨೮. ಮನಸ್ಸಿನ ಎರಡು ಅವಸ್ಥೆಗಳು ೭೧

३೦. ಸಂತರು ಯಾರ ಮನೆಗೆ ಹೋಗುವುದಿಲ್ಲ ? ೭೧

## ವಿಷಯಸೂಚಿಯಲ್ಲಿನ ಕ್ರಮಾಂಕ ೩

# ಪರಾತ್ಪರ ಗುರು ಡಾ. ಜಯಂತ ಆಠವಲೆಯವರು ತೆಗೆದುಕೊಂಡ ಅಧ್ಯಾತ್ಮದ ಅಧ್ಯಯನವರ್ಗಗಳು : ಸಾಧನೆಯ ಬಗ್ಗೆ ಚೈತನ್ಯಮಯ ಮಾರ್ಗದರ್ಶನ ಮಾಡುವ ದೀಪಸ್ತಂಭ !

**೧. ಅಧ್ಯಾತ್ಮದ ಅಧ್ಯಯನದ ಮಹತ್ವ :** ‘ಪಂಚಜ್ಞಾನೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ), ಮನಸ್ಸು ಮತ್ತು ಬುದ್ಧಿಯ ಮೂಲಕ ಏನು ಇಷ್ಟವಾಗುತ್ತದೆಯೋ ಅದು ಸುಖ, ಉದಾ. ‘ಐಸ್‌ಕ್ರೀಮ್’ ತಿನ್ನುವುದು, ಪರೀಕ್ಷೆಯಲ್ಲಿ ಪ್ರಥಮ ಶ್ರೇಯಾಂಕ ಬರುವುದು. ಇಂತಹ ಸುಖಗಳು ತಾತ್ಕಾಲಿಕ ಮತ್ತು ಕನಿಷ್ಠ ಮಟ್ಟದ್ದಾಗಿರುತ್ತವೆ. ನಿಜವಾದ ಸುಖವೆಂದರೆ, ಆತ್ಮಸುಖ, ಅಂದರೆ ಆನಂದ. ಆನಂದವು ಚಿರಂತನ ಮತ್ತು ಸರ್ವೋಚ್ಚ ಮಟ್ಟದ್ದಾಗಿರುತ್ತದೆ. ಕೇವಲ ಸಾಧನೆಯಿಂದಲೇ ನಾವು ಆನಂದವನ್ನು ಅನುಭವಿಸಬಹುದು. ಸಾಧನೆಯು ಚೆನ್ನಾಗಿ ಆಗಲು ಅಧ್ಯಾತ್ಮವನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿರುತ್ತದೆ. ಇದರ ಕಾರಣವೇನೆಂದರೆ, ಅಧ್ಯಾತ್ಮದ ಅಧ್ಯಯನದಿಂದ ಸಾಧನೆಯನ್ನು ಮಾಡುವುದರ ಮಹತ್ವ ಮನಸ್ಸಿನಲ್ಲಿ ಬಿಂಬಿತವಾಗುತ್ತದೆ, ಸಾಧನೆಗೆ ಸಂಬಂಧಿಸಿದ ವಿವಿಧ ಕೃತಿಗಳ ಹಿಂದಿನ ಶಾಸ್ತ್ರವು ತಿಳಿಯುವುದರಿಂದ ಸಾಧನೆಯ ಮೇಲಿನ ಶ್ರದ್ಧೆ ಹೆಚ್ಚಾಗುತ್ತದೆ ಮತ್ತು ಸಾಧನೆಯಲ್ಲಿನ ಪ್ರಗತಿಯ ಮುಂದುಮುಂದಿನ ಹಂತಗಳನ್ನು ತಲುಪುವ ಮಾರ್ಗಗಳೂ ತಿಳಿಯುತ್ತವೆ.

**೨. ಪ್ರವಚನ ಮತ್ತು ಸತ್ಸಂಗಗಳ ತುಲನೆಯಲ್ಲಿ ಅಧ್ಯಯನವರ್ಗಗಳ ಮಹತ್ವ**

**೨ ಅ. ಪ್ರವಚನ :** ಪ್ರವಚನಗಳಲ್ಲಿ ಪ್ರವಚನ ಮಾಡುವವರು ಮಾತನಾಡುತ್ತಾರೆ. ಅವರು ಶ್ರೋತೃಗಳಿಗೆ ವಿಷಯ ತಿಳಿಯಿತೋ, ಇಲ್ಲವೋ ಎಂಬ ವಿಚಾರವನ್ನು ಹೆಚ್ಚಾಗಿ ಮಾಡುವುದಿಲ್ಲ.

**೨ ಆ. ಸತ್ಸಂಗ :** ಶ್ರೋತೃಗಳಿಗೆ ವಿಷಯ ತಿಳಿಯಿತೋ ಇಲ್ಲವೋ ಎಂಬುದರ ಕಡೆ ಸತ್ಸಂಗ ತೆಗೆದುಕೊಳ್ಳುವವರ ಗಮನ ಸ್ವಲ್ಪಮಟ್ಟಿಗೆ ಇರುತ್ತದೆ. ಸತ್ಸಂಗಗಳಲ್ಲಿ ಸತ್ಸಂಗ ತೆಗೆದುಕೊಳ್ಳುವವರು ಮಾತನಾಡುತ್ತಾರೆ ಮತ್ತು ಉಳಿದವರೆಲ್ಲರೂ ಕೇಳುತ್ತಿರುತ್ತಾರೆ.

**೨ ಇ. ಅಧ್ಯಯನವರ್ಗ :** ಅಧ್ಯಯನವರ್ಗಗಳಲ್ಲಿ ಪ್ರಮುಖವಾಗಿ ಪ್ರಶ್ನೆಗಳನ್ನು ಕೇಳಲಾಗುತ್ತದೆ ಮತ್ತು ಅಧ್ಯಯನವರ್ಗ ತೆಗೆದುಕೊಳ್ಳುವವರು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಾರೆ; ಆದ್ದರಿಂದ ಅಧ್ಯಯನವರ್ಗಗಳಿಗೆ ಹೆಚ್ಚು ಮಹತ್ವವಿದೆ. ‘ಶ್ರೋತೃಗಳಿಗೆ ವಿಷಯ ತಿಳಿಯಿತೇ ಇಲ್ಲವೇ’ ಎಂಬುದರ ಕಡೆ ಅಧ್ಯಯನವರ್ಗ

ತೆಗೆದುಕೊಳ್ಳುವವರ ಗಮನವಿರುತ್ತದೆ. ಪರಾತ್ಪರ ಗುರು ಡಾ. ಆಠವಲೆಯವರು ವಿವಿಧ ಕಡೆಗಳಲ್ಲಿ ಅಧ್ಯಯನವರ್ಗಗಳನ್ನು ತೆಗೆದುಕೊಂಡು ಸಮಾಜದಲ್ಲಿನ ಜಿಜ್ಞಾಸುಗಳ ಸಂದೇಹ ನಿವಾರಣೆ ಮಾಡಿದ್ದಾರೆ. ಇದರಿಂದ ಅಧ್ಯಯನವರ್ಗಕ್ಕೆ ಬರುವ ಅನೇಕ ಜಿಜ್ಞಾಸುಗಳ ಸಾಧನೆ ಹೆಚ್ಚಾಗಿ ಈಗ ಅವರು ಸಾಧನೆಯಲ್ಲಿ ಮುಂದಿನ ಹಂತವನ್ನು ತಲುಪಿದ್ದಾರೆ.

**೩. ಪರಾತ್ಪರ ಗುರು ಡಾ. ಆಠವಲೆಯವರು ತೆಗೆದುಕೊಂಡ ಅಧ್ಯಯನವರ್ಗಗಳ ಕಾಲ :** ಪರಾತ್ಪರ ಗುರು ಡಾ. ಆಠವಲೆಯವರು ತಮ್ಮ ಮುಂಬೈಯಲ್ಲಿನ ಚಿಕಿತ್ಸಾಲಯ ದಲ್ಲಿ ೧೭.೫.೧೯೮೭, ಶನಿವಾರ ಮತ್ತು ೧೮.೫.೧೯೮೭, ರವಿವಾರದಂದು 'ಅಧ್ಯಾತ್ಮ'ದ ಬಗ್ಗೆ ಮೊದಲ ಅಧ್ಯಯನವರ್ಗವನ್ನು ತೆಗೆದುಕೊಂಡರು. ೧೯೮೭ ರಿಂದ ೧೯೯೪ ರ ಕಾಲಾವಧಿಯಲ್ಲಿ ಅವರು ಇತರೆಡೆಗಳಿಗೆ ಹೋಗಿ ಅಲ್ಲಿನ ದೇವಸ್ಥಾನ ಗಳು, ಸಭಾಗೃಹ ಇತ್ಯಾದಿ ಕಡೆಗಳಲ್ಲಿ ಅಧ್ಯಯನವರ್ಗಗಳನ್ನು ತೆಗೆದುಕೊಂಡರು.

**೪. ಅಧ್ಯಯನವರ್ಗಗಳ ಸ್ವರೂಪ :** ಪರಾತ್ಪರ ಗುರು ಡಾ. ಆಠವಲೆಯವರು ಅಧ್ಯಯನ ವರ್ಗಗಳಲ್ಲಿ ಕುಲದೇವಿಯ ನಾಮಜಪ, ಸಂತರು ಹೇಳಿದ ನಾಮಜಪ, ನಾಮಜಪ ದಲ್ಲಿನ ಪ್ರಗತಿಯ ಹಂತಗಳು, ಸಂತಸಹವಾಸ ಮತ್ತು ಗುರ್ವಾಜ್ಞಾಪಾಲನೆ ಇವುಗಳ ಮಹತ್ವ, ವಿವಿಧ ಯೋಗಮಾರ್ಗಗಳು (ಉದಾ. ಭಕ್ತಿಯೋಗ, ಜ್ಞಾನ ಯೋಗ, ಗುರು ಕೃಪಾಯೋಗ), ಸಾಧನೆ ಮಾಡುವುದರ ಮಹತ್ವ ಇತ್ಯಾದಿ ವಿಷಯಗಳ ವಿವೇಚನೆ ಮಾಡುತ್ತಿದ್ದರು. ಅಧ್ಯಯನವರ್ಗಗಳಲ್ಲಿ ಸಾಧನೆಯ ಕುರಿತು ಪ್ರಶ್ನೋತ್ತರಗಳಾಗು ತ್ತಿದ್ದವು, ಹಾಗೆಯೇ ಸೂಕ್ಷ್ಮದಲ್ಲಿನ ಪ್ರಯೋಗಗಳನ್ನೂ ಮಾಡಿಸಿಕೊಳ್ಳಲಾಗುತ್ತಿತ್ತು.

**೫. ಅಧ್ಯಯನವರ್ಗಗಳನ್ನು ತೆಗೆದುಕೊಳ್ಳುವುದರ ಸಂದರ್ಭದಲ್ಲಿ ಪರಾತ್ಪರ ಗುರು ಡಾಕ್ಟರರ ಗಮನಕ್ಕೆ ಬಂದ ವೈಶಿಷ್ಟ್ಯಗಳು**

**೫ ಅ. ಉಚಿತವಾಗಿ ಅಧ್ಯಯನವರ್ಗ ತೆಗೆದುಕೊಳ್ಳುವುದು :** 'ಜ್ಞಾನದಾನದ ಪವಿತ್ರ ಕರ್ಮವನ್ನು ಉಚಿತವಾಗಿ ಮಾಡಬೇಕು' ಎಂಬುದು ಹಿಂದೂ ಸಂಸ್ಕೃತಿಯ ಬೋಧನೆ ಯಾಗಿದೆ. ಹಿಂದಿನ ಕಾಲದಲ್ಲಿ 'ಗುರುಕುಲ ಶಿಕ್ಷಣಪದ್ಧತಿ' ಹೀಗೆಯೇ ಇರುತ್ತಿತ್ತು. ಪರಾತ್ಪರ ಗುರು ಡಾಕ್ಟರರೂ ಅಧ್ಯಯನವರ್ಗಗಳನ್ನು ಉಚಿತವಾಗಿ ತೆಗೆದುಕೊಳ್ಳುತ್ತಿದ್ದರು.

**೫ ಆ. ತಮ್ಮ ಸಮಯ ಮತ್ತು ಹಣವನ್ನು ಖರ್ಚುಮಾಡಿ ದೂರದೂರದ ಸ್ಥಳಗಳಿಗೆ ಹೋಗಿ ಅಧ್ಯಯನವರ್ಗಗಳನ್ನು ತೆಗೆದುಕೊಳ್ಳುವುದು :** ಪರಾತ್ಪರ ಗುರು ಡಾಕ್ಟರರು ತಮ್ಮ ಚಿಕಿತ್ಸಾಲಯದ ಕಾರ್ಯವನ್ನು ಸಂಭಾಳಿಸಿಕೊಂಡು ಮೊದಲು ಮುಂಬೈಯಲ್ಲಿ ಮತ್ತು ನಂತರ ಮುಂಬೈಯ ಹೊರಗೆ, ಹಾಗೆಯೇ ಇತರ ರಾಜ್ಯಗಳಿಗೂ ಹೋಗಿ

ಅಧ್ಯಯನವರ್ಗಗಳನ್ನು ತೆಗೆದುಕೊಳ್ಳುತ್ತಿದ್ದರು. ಇದನ್ನು ಮಾಡುವಾಗ ಅವರು ಸಮಯ ಮತ್ತು ಹಣದ ವಿಚಾರ ಮಾಡುತ್ತಿರಲಿಲ್ಲ. ಹೊರ ಊರುಗಳಿಗೆ ಹೋದಾಗ ಕೆಲವೊಮ್ಮೆ ಕೆಲವು ಸಾಧಕರ ಮನೆಗಳಲ್ಲಿ ಯಾವ ಪರಿಸ್ಥಿತಿ ಇರುತ್ತಿತ್ತೋ, ಅದಕ್ಕೆ ಹೊಂದಿಕೊಂಡು ಅವರಿಗೆ ೧-೨ ದಿನಗಳ ವರೆಗೆ ಇರಬೇಕಾಗುತ್ತಿತ್ತು. 'ಹೆಚ್ಚೆಚ್ಚು ಜಿಜ್ಞಾಸುಗಳಿಗೆ ಅಧ್ಯಾತ್ಮದ ಶಿಕ್ಷಣ ದೊರಕಿ ಅವರು ಸಾಧನೆಯನ್ನು ಮಾಡಬೇಕು' ಎಂಬ ತಳಮಳದಿಂದ ಪರಾತ್ಪರ ಗುರು ಡಾಕ್ಟರರು ಎಲ್ಲ ಪ್ರವಾಸಗಳನ್ನು ಆನಂದದಿಂದ ಮಾಡುತ್ತಿದ್ದರು.

**ॐ ಇ. ಋಷಿಮುನಿಗಳು ಮತ್ತು ಸಂತರು ಬರೆದ ಗ್ರಂಥಗಳಲ್ಲಿನ ಜ್ಞಾನವನ್ನು ಸರ್ವಸಾಮಾನ್ಯರಿಗೆ ಸಹಜವಾಗಿ ಆಚರಿಸಲು ಬರುವಂತಹ ರೀತಿಯಲ್ಲಿ ಹೇಳುವುದು :** ಕೆಲವು ಕಡೆಗಳಲ್ಲಿ ಅಧ್ಯಾತ್ಮದ ಮೇಲಿನ ಪ್ರವಚನಗಳನ್ನು (ವ್ಯಾಖ್ಯಾನಗಳನ್ನು) ಆಯೋಜಿಸಲಾಗುತ್ತದೆ. ಆ ಪ್ರವಚನಗಳಲ್ಲಿ ಮುಖ್ಯವಾಗಿ ಭಾರತದಲ್ಲಿ ಆಗಿ ಹೋದ ಋಷಿಗಳು ಮತ್ತು ಸಂತರು ಬರೆದ ಗ್ರಂಥಗಳಲ್ಲಿನ (ಉದಾ. ಶ್ರೀಮದ್ಭಗವದ್ಗೀತೆ, ದಾಸಬೋಧ ಇವುಗಳಲ್ಲಿನ) ಜ್ಞಾನವನ್ನು ಹೇಳಲಾಗುತ್ತದೆ. ಸರ್ವಸಾಮಾನ್ಯರಿಗೆ ಇಂತಹ ಗ್ರಂಥಗಳಲ್ಲಿನ ಜ್ಞಾನವನ್ನು ಆಚರಣೆಯಲ್ಲಿ ತರುವುದು ಸ್ವಲ್ಪ ಕಠಿಣವಾಗಿರುತ್ತದೆ. ಪರಾತ್ಪರ ಗುರು ಡಾಕ್ಟರರು ಅಧ್ಯಯನವರ್ಗಗಳಲ್ಲಿ ಇಂತಹ ಗ್ರಂಥಗಳಲ್ಲಿನ ಜ್ಞಾನದ ಸಾರಾಂಶವನ್ನು, ಅಂದರೆ ಅಧ್ಯಾತ್ಮದಲ್ಲಿನ ಬೋಧನೆಯನ್ನು ಸರ್ವಸಾಮಾನ್ಯರಿಗೆ ಸಹಜವಾಗಿ ಆಚರಣೆಯಲ್ಲಿ ತರಲು ಸಾಧ್ಯವಾಗುವಂತಹ ಪದ್ಧತಿಯಲ್ಲಿ ಹೇಳುತ್ತಿದ್ದರು. ಇದರಿಂದ ಯಾವುದೇ ಆಧ್ಯಾತ್ಮಿಕ ಮಟ್ಟದ ಸಾಧಕನಿಗೆ ಅಧ್ಯಾತ್ಮವು ತಿಳಿಯುತ್ತಿತ್ತು.

**ॐ ಈ. ಅಧ್ಯಾತ್ಮದಲ್ಲಿನ ಎಲ್ಲ ವಿಷಯಗಳ ಬಗ್ಗೆ ಮಾರ್ಗದರ್ಶನ ಮಾಡುವುದು :** ಅಧ್ಯಯನವರ್ಗಕ್ಕೆ ಬರುವ ಜಿಜ್ಞಾಸುಗಳ ಸಂದೇಹಗಳ ನಿವಾರಣೆ ಮಾಡುವಾಗ ಪರಾತ್ಪರ ಗುರು ಡಾಕ್ಟರರು ಅಧ್ಯಾತ್ಮಶಾಸ್ತ್ರವನ್ನು ತಿಳಿಸಿ ಹೇಳುತ್ತಿದ್ದರು. ಇದರಿಂದ ಜಿಜ್ಞಾಸುಗಳಿಗೆ ಜ್ಞಾನತೃಪ್ತಿಯ ಆನಂದ ದೊರಕುತ್ತಿತ್ತು ಮತ್ತು ಅವರ ಅಧ್ಯಾತ್ಮದ ಮೇಲಿನ ಶ್ರದ್ಧೆಯೂ ಹೆಚ್ಚಾಗುತ್ತಿತ್ತು.

**ॐ ಉ. ಆಧ್ಯಾತ್ಮಿಕ ಗ್ರಂಥಗಳ ವಿಶೇಷ ವಾಚನ ಇಲ್ಲದಿರುವಾಗಲೂ ಜಿಜ್ಞಾಸುಗಳ ಯಾವುದೇ ವಿಷಯದ ಪ್ರಶ್ನೆಗಳಿಗೆ ಕೂಡಲೇ ಉತ್ತರ ಕೊಡುವುದು :** ಪರಾತ್ಪರ ಗುರು ಡಾಕ್ಟರರು ವೇದ, ಪುರಾಣ, ದರ್ಶನಗಳಂತಹ ಧರ್ಮಗ್ರಂಥಗಳ ಮತ್ತು ಜ್ಞಾನಯೋಗ, ಕರ್ಮಯೋಗ, ಧ್ಯಾನಯೋಗ ಇವುಗಳಂತಹ ವಿವಿಧ ಸಾಧನಾಮಾರ್ಗಗಳ ಗ್ರಂಥಗಳ ಅಷ್ಟೇನೂ ಅಧ್ಯಯನ ಮಾಡದಿದ್ದರೂ, ಅಧ್ಯಯನವರ್ಗಗಳಲ್ಲಿ ಜಿಜ್ಞಾಸುಗಳು ಕೇಳಿದ ಅಧ್ಯಾತ್ಮದಲ್ಲಿನ ಯಾವುದೇ ವಿಷಯದ ಪ್ರಶ್ನೆಗಳಿಗೆ ಕೂಡಲೇ

ಉತ್ತರ ನೀಡುತ್ತಿದ್ದರು. ಯಾರಾದರೊಬ್ಬರ ಮನೋಲಯ ಮತ್ತು ಬುದ್ಧಿಲಯವಾಗಿದ್ದಲ್ಲಿ, ಅವರಿಗೆ ವಿಶ್ವಮನಸ್ಸು ಮತ್ತು ವಿಶ್ವಬುದ್ಧಿಯ ಮಾಧ್ಯಮದಿಂದ ಜ್ಞಾನಗ್ರಹಣವಾಗಬಹುದು. ಪರಾತ್ಪರ ಗುರು ಡಾಕ್ಟರರ ಸಂದರ್ಭದಲ್ಲಿ ಹೀಗೆಯೇ ಆಗುತ್ತಿತ್ತು. ಇದರಿಂದ ಆ ಕಾಲದಲ್ಲಿಯೂ ಪರಾತ್ಪರ ಗುರು ಡಾಕ್ಟರರ ಉಚ್ಚ ಆಧ್ಯಾತ್ಮಿಕ ಸ್ಥಿತಿ ಗಮನಕ್ಕೆ ಬರುತ್ತದೆ.

**೫ ಊ. ಸಾಧಕರ ಕೆಲವು ಪ್ರಶ್ನೆಗಳ ಉತ್ತರಗಳನ್ನು ಸೂಕ್ಷ್ಮದಿಂದ ತಿಳಿದುಕೊಂಡು ತಪ್ಪಿಲ್ಲದೇ ಕೊಡುವುದು :** ಇಂತಹ ಸಾಧಕರಿಗೆ ಪರಾತ್ಪರ ಗುರು ಡಾಕ್ಟರರು ಸೂಕ್ಷ್ಮದಿಂದ ತಿಳಿದುಕೊಂಡು ಕೊಟ್ಟ ಉತ್ತರಗಳ ಹಾಗೆಯೇ ಮುಂದೆ ಅನುಭವ ಬರುತ್ತಿತ್ತು. ಇದರಿಂದ ಆ ಕಾಲದಲ್ಲೂ ಪರಾತ್ಪರ ಗುರು ಡಾಕ್ಟರರ ಸೂಕ್ಷ್ಮದಲ್ಲಿನ ವಿಷಯಗಳನ್ನು ತಿಳಿದುಕೊಳ್ಳುವ ಅಪಾರ ಕ್ಷಮತೆ ಮತ್ತು ಅಧ್ಯಾತ್ಮದಲ್ಲಿನ ಅವರ ಅಧಿಕಾರ ಗಮನಕ್ಕೆ ಬರುತ್ತದೆ.

**೫ ಎ. ಪರಾತ್ಪರ ಗುರು ಡಾಕ್ಟರರೊಂದಿಗಿರುವ ಆತ್ಮೀಯತೆಯಿಂದಾಗಿ ಸಾಧಕರು ಸಾಧನೆಯಲ್ಲಿನ ವೈಯಕ್ತಿಕ ಅಡಚಣೆಗಳ ಬಗ್ಗೆಯೂ ಸಂಕೋಚವಿಲ್ಲದೇ ಕೇಳುತ್ತಿದ್ದರು.**

**೫ ಏ. ಪರಾತ್ಪರ ಗುರು ಡಾಕ್ಟರರ ಚೈತನ್ಯಮಯ ವಾಣಿಯಿಂದ ಜಿಜ್ಞಾಸುಗಳ ಅಂತಃಕರಣದಲ್ಲಿ ಗಹನವಾದ ಸಾಧನೆಯ ಸಂಸ್ಕಾರವಾಗುವುದು :** ಹೆಚ್ಚಿನ ಜಿಜ್ಞಾಸುಗಳು ಮೊದಲ ಬಾರಿಗೆ ಅಧ್ಯಯನವರ್ಗಕ್ಕೆ ಬಂದು ಮುಂದೆ ಶಾಶ್ವತವಾಗಿ ಸನಾತನದ ಸಾಧಕರಾಗುತ್ತಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಪರಾತ್ಪರ ಗುರು ಡಾಕ್ಟರರ ಚೈತನ್ಯಮಯ ವಾಣಿಯ ಪ್ರಭಾವ ! ಅವರ ಚೈತನ್ಯಮಯ ವಾಣಿಯಿಂದ ಜಿಜ್ಞಾಸುಗಳ ಅಂತಃಕರಣದಲ್ಲಿ ಸಾಧನೆಯ ಗಹನವಾದ ಸಂಸ್ಕಾರವಾಗುತ್ತಿತ್ತು. ಇದರಿಂದ ಅವರಲ್ಲಿ ಸಾಧನೆ ಮಾಡುವ ನಿಶ್ಚಯ ದೃಢವಾಗುತ್ತಿತ್ತು ಮತ್ತು ಅವರು ತಳಮಳದಿಂದ ಸಾಧನೆಯನ್ನು ಆರಂಭಿಸುತ್ತಿದ್ದರು.

**೫ ಐ. ಅಧ್ಯಯನವರ್ಗಗಳಲ್ಲಿ ಸಾಧಕರಿಗೆ ಅನುಭೂತಿಗಳು ಬರುತ್ತಿದ್ದವು, ಉದಾ. ದೈವೀ ಸುಗಂಧ ಬರುವುದು, ಮನಸ್ಸು ನಿರ್ವಿಚಾರವಾಗುವುದು ಇತ್ಯಾದಿ.**

**೫ ಒ. ಅಧ್ಯಯನವರ್ಗಗಳನ್ನು ತೆಗೆದುಕೊಳ್ಳಲು ಸಾಧಕರನ್ನೂ ತಯಾರಿಸುವುದು :** ಪರಾತ್ಪರ ಗುರು ಡಾಕ್ಟರರು ವಿವಿಧ ಕಡೆಗಳಲ್ಲಿ ಅಧ್ಯಯನವರ್ಗಗಳನ್ನು ತೆಗೆದುಕೊಳ್ಳಲು ಹೋಗುವಾಗ ಕೆಲವು ಸಾಧಕರನ್ನು ಕಲಿಯಲು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಈ ಸಾಧಕರಿಗೆ, ಹಾಗೆಯೇ ಪರಾತ್ಪರ ಗುರು ಡಾಕ್ಟರರು ಎಲ್ಲಿ ಹೋಗುತ್ತಿದ್ದರೋ, ಅಲ್ಲಿನ ಕೆಲವು ಸ್ಥಳೀಯ ಸಾಧಕರಿಗೆ ಅವರು ಅಧ್ಯಯನವರ್ಗಗಳನ್ನು ತೆಗೆದುಕೊಳ್ಳುವ ದೃಷ್ಟಿಯಿಂದ ಕಲಿಸುತ್ತಿದ್ದರು. ಇದರಿಂದ ಮುಂದೆ

ಸನಾತನದ ಅನೇಕ ಸಾಧಕರು ಅಧ್ಯಯನವರ್ಗಗಳನ್ನು ತೆಗೆದುಕೊಳ್ಳಲು, ಹಾಗೆಯೇ ಜವಾಬ್ದಾರಿಯನ್ನು ತೆಗೆದುಕೊಂಡು ಅಧ್ಯಾತ್ಮಪ್ರಸಾರದ ಕಾರ್ಯವನ್ನು ಮಾಡಲು ತಯಾರಾದರು. (ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಬಣ್ಣದ ಪುಟಗಳಲ್ಲಿನ 'ಛಾಯಾಚಿತ್ರ ೮'ನ್ನು ನೋಡಿ.) ಇದರಿಂದ ಕಡಿಮೆ ಕಾಲಾವಧಿಯಲ್ಲಿಯೇ ಸನಾತನದ ಧರ್ಮಪ್ರಸಾರಕಾರ್ಯ ವೇಗವಾಗಿ ಹೆಚ್ಚಾಯಿತು.

**೬. ಅಧ್ಯಯನವರ್ಗಗಳ ಫಲನಿಷ್ಪತ್ತಿ**

**೬ ಅ. ಅನೇಕ ಜಿಜ್ಞಾಸುಗಳು ಸಾಧಕರಾದರು ಮತ್ತು ಅನೇಕ ಸಾಧಕರು ಪೂರ್ಣವೇಳೆ ಸಾಧಕರಾದರು.**

**೬ ಆ. ಅನೇಕ ಸಾಧಕರ ಅಧ್ಯಾತ್ಮಿಕ ಪ್ರಗತಿ ಒಳ್ಳೆಯ ರೀತಿಯಲ್ಲಿ ಆಗುವುದು :** ಅಧ್ಯಯನವರ್ಗಗಳಿಗೆ ಬರುವ ಅನೇಕ ಸಾಧಕರು ಕಳೆದ ಕೆಲವು ವರ್ಷಗಳಲ್ಲಿ ಶೇ. ೬೦ ಕ್ಕಿಂತ ಹೆಚ್ಚು ಆಧ್ಯಾತ್ಮಿಕ ಮಟ್ಟವನ್ನು ತಲುಪಿದ್ದಾರೆ ಮತ್ತು ಇನ್ನು ಕೆಲವು ಸಾಧಕರು ಸಂತರೂ ಆಗಿದ್ದಾರೆ.

**೭. ಪರಾತ್ಪರ ಗುರು ಡಾಕ್ಟರರು ಅಧ್ಯಯನವರ್ಗಗಳಲ್ಲಿ ಮಾಡಿದ ಮಾರ್ಗದರ್ಶನವನ್ನು ಪ್ರಸ್ತುತ ಗ್ರಂಥಮಾಲಿಕೆಯಲ್ಲಿ ವಿಷಯವಾರು ಪ್ರಕಟಿಸದೇ, ಇದ್ದ ಹಾಗೆಯೇ ಪ್ರಕಟಿಸುವ ಹಿಂದಿನ ಕಾರಣ :** ಅನೇಕ ಸಾಧಕರಿಗೆ 'ಪರಾತ್ಪರ ಗುರು ಡಾಕ್ಟರರು ಹಿಂದೆ ಅಧ್ಯಯನವರ್ಗಗಳಲ್ಲಿ ಏನು ಮತ್ತು ಹೇಗೆ ಕಲಿಸುತ್ತಿದ್ದರು ?' ಎಂಬ ಕುತೂಹಲವಿರುತ್ತದೆ. ಅವರ ಈ ಕುತೂಹಲ ನೀಗಲು, ಅಂದರೆ 'ಪರಾತ್ಪರ ಗುರು ಡಾಕ್ಟರರ ಅಧ್ಯಯನವರ್ಗಗಳು ನಿರ್ದಿಷ್ಟವಾಗಿ ಹೇಗೆ ನಡೆಯುತ್ತಿದ್ದವು' ಎಂದು ತಿಳಿಯಲು ಅಧ್ಯಯನವರ್ಗಗಳಲ್ಲಿನ ಮಾರ್ಗದರ್ಶನವನ್ನು ಪ್ರಸ್ತುತ ಗ್ರಂಥಮಾಲಿಕೆಯಲ್ಲಿ ವಿಷಯವಾರು ಪ್ರಕಟಿಸದೇ, ಇದ್ದ ಹಾಗೆಯೇ ಪ್ರಕಟಿಸಲಾಗಿದೆ. ಅಧ್ಯಯನವರ್ಗಗಳಲ್ಲಿನ ವಿಷಯವಾರು ವಿವೇಚನೆಯನ್ನು ಸನಾತನವು ಪ್ರಕಾಶಿಸಿದ ಆಯಾ ವಿಷಯಗಳ ಗ್ರಂಥಗಳಲ್ಲಿ ನೀಡಲಾಗಿದೆ ಅಥವಾ ಆಯಾ ವಿಷಯಗಳಲ್ಲಿನ ಮುಂಬರುವ ಗ್ರಂಥಗಳಲ್ಲಿ ನೀಡಲಾಗುವುದು.

**೮. ಪ್ರಾರ್ಥನೆ :** 'ಪ್ರಸ್ತುತ ಗ್ರಂಥದ ಅಧ್ಯಯನದಿಂದ ಜಿಜ್ಞಾಸು ಮತ್ತು ಸಾಧಕರಿಗೆ ಸಾಧನೆಯಲ್ಲಿನ ಮುಂದುಮುಂದಿನ ಹಂತಗಳನ್ನು ತಲುಪಲು ಮಾರ್ಗದರ್ಶನ ಸಿಗಲಿ ಮತ್ತು ಅದಕ್ಕನುಸಾರ ಸಾಧನೆಯನ್ನು ಮಾಡಿ ಅವರ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !'

– **(ಪೂ.) ಶ್ರೀ. ಸಂದೀಪ ಆಳಶಿ** (೭.೧೦.೨೦೨೦)